ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ – 577401

**Phone No. : 08183 226071** **Email: sagardcf@rediffmail.com**

ಕ್ರ:ಬಿ1/ಭೂಮಿ/ಎಫ್‌ಸಿ/ರೋಡ್/156224/2022–23 ದಿ: 15–09–2022

ಗೆ,

ಕಾರ್ಯನಿರ್ವಾಹಕ ಅಭಿಯಂತರರು,
ನ್ಯಾಷನಲ್ ಹೈವೆ ಡಿವಿಷನ್,
APMC-Yard, ಶಿವಮೊಗ್ಗ.

**Proposal No. FP/KA/ROAD/156224/2022**

**ವಿಷಯ:–** Diversion of 20.434 Ha of Forest Land in Hosanagara (T), Shimoga (D) for Construction of 2L+PS Road from km 55.60 to km 90.70 Mavina koppa of NH 766 C with Major Bridgs across Sharavathi Back Water.

**ಉಲ್ಲೇಖ:–**
1. ಪರಿವೇಶ್ ತಂತ್ರಾಂಶದಲ್ಲಿ ಸಲ್ಲಿಕೆಯಾದ ಎಫ್.ಸಿ ಪ್ರಸ್ತಾವನೆ ಸಂಖ್ಯೆ: FP/KA/ROAD/156224/2022
3. ನಿಮ್ಮ ಕಛೇರಿ ಪತ್ರ ಸಂಖ್ಯೆ: EE/NHD/SMG/AE-1/Re-align/NH 766c/KM 56 to 89/2022-23/1036 ದಿನಾಂಕ: 19–08–2022.
4. ವಲಯ ಅರಣ್ಯಾಧಿಕಾರಿ, ನಗರ ವಲಯ, ನಗರ ಇವರ ಕಛೇರಿ ಪತ್ರ ಸಂಖ್ಯೆ: 493/2022–23 ದಿನಾಂಕ: 06–09–2022.
5. ವಲಯ ಅರಣ್ಯಾಧಿಕಾರಿ, ಹೊಸನಗರ ವಲಯ, ಹೊಸನಗರ ಇವರ ಕಛೇರಿ ಪತ್ರ ಸಂಖ್ಯೆ: 626/2022–23 ದಿನಾಂಕ: 06–09–2022.
6. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪವಿಭಾಗ, ಹೊಸನಗರ ಇವರ ಕಛೇರಿ ಪತ್ರ ಸಂಖ್ಯೆ: 629/2022–23 ದಿನಾಂಕ: 14–09–2022.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು ವ್ಯಾಪ್ತಿಯಲ್ಲಿ Diversion of 20.434 Ha of Forest Land in Hosanagara (T), Shimoga (D) for Construction of 2L+PS Road from km 55.60 to km 90.70 Mavina koppa of NH 766 C with Major Bridgs across Sharavathi Back Water ಯೋಜನೆಗಾಗಿ ಸಾಗರ ವಿಭಾಗ ವ್ಯಾಪ್ತಿಗೆ ಒಳಪಡುವ 7 ಗ್ರಾಮಗಳಿಂದ ಒಟ್ಟು 20.434 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹಾಗೂ ಅರಣ್ಯೇತರ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ನೀವು ಉದ್ದೇಶಿಸಿದ್ದು, ನಿಮ್ಮ ಪ್ರಸ್ತಾವನೆಯಲ್ಲಿ ಸದರಿ ಯೋಜನೆಗೆ ಬಳಕೆಯಾಗಲಿರುವ ಗ್ರಾಮವಾರು ಅರಣ್ಯ ಪ್ರದೇಶಗಳ ಮಾಹಿತಿ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಗ್ರಾಮ | ಸರ್ವೆ ನಂ. | ವಿಸ್ತೀರ್ಣ (ಹೆಕ್ಟೇರ್) |
|---|---|---|---|
| 1 | ಗಂಗನಕೊಪ್ಪ | 21 | 0.337 |
| 2 | ಸುತ್ತಾ | 75 | 0.165 |
| | | 10 | 1.635 |
| 3 | ಮಣಶೆಟ್ಟಿ | 38 | 1.866 |

| | | | |
|---|---|---|---|
| 4 | ಎಲ್-ಗುಡ್ಡೇಕೊಪ್ಪ | 45 | 0.222 |
| | | 46 | 1.260 |
| | | 27 | 0.900 |
| 5 | ಹೆಬ್ಬುರುಳಿ | 204 | 2.551 |
| | | 221 | 3.435 |
| | | 51 | 3.301 |
| | | 44 | 0.945 |
| 6 | ಹೊಸೂರು | 43 | 0.301 |
| 7 | ಆಡುಗೋಡಿ | 74 | 1.992 |
| | | 79 | 1.524 |
| **7 ಗ್ರಾಮಗಳಿಂದ ಒಟ್ಟು ವಿಸ್ತೀರ್ಣ (ಹೆಕ್ಟೇರ್)** | | | **20.434** |

ಸದರಿ ಈ ಯೋಜನೆಗೆ ಸಂಬಂಧಿಸಿದಂತೆ ನಿಮ್ಮ ಸಮೀಕ್ಷೆಯ ಪ್ರಕಾರ ಸಾಗರ ಅರಣ್ಯ ವಿಭಾಗದ ಹೊಸನಗರ ಮತ್ತು ನಗರ ವಲಯದ ವ್ಯಾಪ್ತಿಯಲ್ಲಿ ಬರುವ 07 ಗ್ರಾಮಗಳಿಂದ ಒಟ್ಟು 20.434 ಹೆಕ್ಟೇರ್ ಅರಣ್ಯ ಪ್ರದೇಶವು ಬಳಕೆಯಾಗಲಿದೆ ಎಂದು ನಮೂದಿಸಿ ಉಲ್ಲೇಖ (1)ರಲ್ಲಿ ಪರಿವೇಶ್ ತಂತ್ರಾಂಶದಲ್ಲಿ ಅರಣ್ಯ ಭೂಮಿ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ವಲಯ ಅರಣ್ಯಾಧಿಕಾರಿಗಳು, ಹೊಸನಗರ ಮತ್ತು ನಗರ ವಲಯ, ಇವರು ಪ್ರಸ್ತಾವನೆಯಲ್ಲಿ ನಮೂದಿಸಿದ ಸ್ಥಳಗಳಗೆ ಭೇಟಿ ನೀಡಿ ನೀವು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ನಕಾಶೆಯಂತೆ ಸ್ಥಳ ಪರಿಶೀಲಿಸಿ, ಸ್ಥಳ ಪರಿಶೀಲನಾ ವರದಿಯನ್ನು ಉಲ್ಲೇಖ (4) & (5)ರಲ್ಲಿ ಈ ಕಛೇರಿಗೆ ಸಲ್ಲಿಸಿರುತ್ತಾರೆ ಹಾಗೂ ಸದರಿ ಸ್ಥಳ ಪರಿಶೀಲನಾ ವರದಿಯನ್ನು ಉಲ್ಲೇಖ(6) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ ಇವರು ಅನುಮೋದಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ಹೊಸನಗರ ಮತ್ತು ನಗರ ವಲಯ ವ್ಯಾಪ್ತಿಯ 7 ಗ್ರಾಮಗಳ 14 ವಿವಿಧ ಸರ್ವೆ ನಂಬರ್‌ಗಳಿಂದ ಒಟ್ಟು 20.434 ಹೆಕ್ಟೇರ್ ಅರಣ್ಯ ಪ್ರದೇಶ ಬಳಕೆಯಾಗಲಿದೆ ಎಂದು ನಮೂದಿಸಲಾಗಿರುತ್ತದೆ. ಆದರೆ ವಲಯ ಅರಣ್ಯಾಧಿಕಾರಿ, ನಗರ ವಲಯ, ನಗರ ಇವರ ಸ್ಥಳ ಪರಿಶೀಲನಾ ವರದಿಯಲ್ಲಿ ನಗರ ಮತ್ತು ಹೊಸನಗರ ವಲಯ ವ್ಯಾಪ್ತಿಯ 7 ಗ್ರಾಮಗಳ 14 ವಿವಿಧ ಸರ್ವೆ ನಂಬರ್‌ಗಳಿಂದ ಒಟ್ಟು 18.844 ಹೆಕ್ಟೇರ್ ಅರಣ್ಯ ಪ್ರದೇಶ ಬಳಕೆಯಾಗಲಿದೆ ಎಂದು ವರದಿ ಸಲ್ಲಿಸಿರುತ್ತಾರೆ. ಸದರಿ ಗ್ರಾಮವಾರು ಹಾಗೂ ಸರ್ವೆ ನಂಬರ್‌ವಾರು ಅರಣ್ಯ ಪ್ರದೇಶದ ಮಾಹಿತಿ ಈ ಕೆಳಕಂಡಂತಿರುತ್ತದೆ.

**ಆಡುಗೋಡಿ-ಮಾವಿನಕೊಪ್ಪ ರಸ್ತೆ ವಿಸ್ತರಣೆ ಯೋಜನೆಗೆ ಉಪಯೋಗವಾಗಲಿರುವ ಅರಣ್ಯ ಪ್ರದೇಶದ ವಿವರ**

| ಕ್ರ. ಸಂ. | ಗ್ರಾಮ | ಅರಣ್ಯ ಪ್ರದೇಶದ ವಿವರ | ಸರ್ವೆ ನಂ. | ಪ್ರಸ್ತಾಪಿತ ರಸ್ತೆ ರಸ್ತೆಯ ಉದ್ದ (ಮೀ) | ವಿಸ್ತೀರ್ಣ (ಹೆಕ್ಟೇರ್) |
|---|---|---|---|---|---|
| 1 | ಸುತ್ತಾ | ಹಸ್ತಾಂತರಿತ ಅರಣ್ಯ | 10 | 545 | 1.635 |
| | | | 75 | 55 | 0.165 |
| | | | | 622 | 1.866 |
| 2 | ಮಣಶೆಟ್ಟಿ | ಮಣಶೆಟ್ಟಿ ಸೆಕ್ಷನ್-4 | 38 | 74 | 0.222 |
| 3 | ಎಲ್. ಗುಡ್ಡೆಕೊಪ್ಪ | ಎಲ್. ಗುಡ್ಡೆಕೊಪ್ಪ ಮೀಸಲು ಅರಣ್ಯ | 45 | 420 | 1.260 |
| | | | 46 | | |
| | | ಪರಿಭಾವಿತ ಅರಣ್ಯ | 27 | 150 | 0.450 |

| | | | | | |
|---|---|---|---|---|---|
| | | ಪರಿಭಾವಿತ ಅರಣ್ಯ | 204 | 470 | 1.411 |
| 4 | ಹೆಬ್ಬುರುಳಿ | ಹೆಬ್ಬುರುಳಿ ಮೀಸಲು ಅರಣ್ಯ | 221 | 1151 | 3.435 |
| | | | 51 | 1100 | 3.301 |
| | | | 44 | 315 | 0.945 |
| 5 | ಹೊಸೂರು | ಹಸ್ತಾಂತರಿತ ಅರಣ್ಯ | 43 | 100 | 0.301 |
| 6 | ಆಡುಗೋಡಿ | ಆಡುಗೋಡಿ ಮೀಸಲು ಅರಣ್ಯ | 74 | 664 | 1.992 |
| | | | 79 | 508 | 1.524 |
| 7 | ಗಂಗನಕೊಪ್ಪ | ಹಸ್ತಾಂತರಿತ ಅರಣ್ಯ | 21 | 132 | 0.337 |
| **7 ಗ್ರಾಮಗಳಿಂದ ಒಟ್ಟು ವಿಸ್ತೀರ್ಣ** | | | | **6306 ಮೀ** | **18.844 ಹೆ** |

ಸ್ಥಳ ಪರಿಶೀಲನಾ ವರದಿಯಂತೆ ನೀವು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ವಿಸ್ತೀರ್ಣಕ್ಕೂ, ಸ್ಥಳದಲ್ಲಿ ಗುರುತಿಸಿರುವ ಪ್ರದೇಶದ ನೈಜ ವಿಸ್ತೀರ್ಣಕ್ಕೂ ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ, ಎಂದು ವಲಯ ಅರಣ್ಯಾಧಿಕಾರಿ, ಹೊಸನಗರ ಮತ್ತು ನಗರ ವಲಯ ಇವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ನೀವು ವಲಯ ಅರಣ್ಯಾಧಿಕಾರಿ, ನಗರ ಮತ್ತು ಹೊಸನಗರ ವಲಯ, ಇವರೊಂದಿಗೆ ಸಮನ್ವಯ ಸಾಧಿಸಿ ಪ್ರಸ್ತಾಪಿತ ಯೋಜನಾ ಪ್ರದೇಶದ ಮರು ಮೋಜಣಿ ನಡೆಸಿ ಪ್ರಸ್ತಾಪಿತ ಯೋಜನೆಯಲ್ಲಿ ನಿಖರವಾಗಿ ಬಳಕೆಯಾಗುವ ಅರಣ್ಯ ಪ್ರದೇಶದ ವಿಸ್ತೀರ್ಣಕ್ಕೆ ಅನ್ವಯಿಸುವಂತೆ ಪರಿಷ್ಕೃತ ಯೋಜನಾ ನಕಾಶೆಗಳನ್ನು (ಟೋಪೊ ಮತ್ತು ಗ್ರಾಮ ನಕಾಶೆ) ತಯಾರಿಸಿ ಹಾಗೂ ಪರಿವೇಶ್ ತಂತ್ರಾಂಶದ ಪಾರ್ಟ್-1ರಲ್ಲಿ ಸೂಕ್ತ ತಿದ್ದುಪಡಿ ಮಾಡಿ ಪರಿಷ್ಕೃತ ಪ್ರಸ್ತಾವನೆಯನ್ನು ಪರಿವೇಶ್ ತಂತ್ರಾಂಶದಲ್ಲಿ ಮರು ಸಲ್ಲಿಸಲು ಮತ್ತು ಪರಿಷ್ಕೃತ ಪ್ರಸ್ತಾವನೆಯ 08 ಸೆಟ್‌ಗಳನ್ನು ಈ ಕಛೇರಿಗೆ ಸಲ್ಲಿಸುವಂತೆ ಈ ಮೂಲಕ ನಿಮ್ಮಲ್ಲಿ ಕೋರಲಾಗಿದೆ.

ನಿಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ